ಶ್ರೀ ಬಸವರಾಜ ಬೊಮ್ಮಾಯಿ : ಮನ್ಯ ಸುರೇಶ್‌ಗೌಡರಿಗೆ ನಾನು ಹೇಳುವುದೇನೆಂದರೆ, ಇದರಿಂದ ಈಗಿರುವಂಥ ಯಾವುದೇ ಯೋಜನೆಗಳಿಗೆ ಮತ್ತು tail end ಪ್ರದೇಶಗಳಿಗೆ ಯಾವುದೇ ರೀತಿ ತೊಂದರೆಯಾಗದಂತೆ ನಾವು ನಿಗಾ ವಹಿಸಿದ್ದೇವೆಯಾದ್ದರಿಂದ ಯಾವುದೇ ರೀತಿಯ ತೊಂದರೆ ಯಾಗುವುದಿಲ್ಲ.

ಅಧ್ಯಕ್ಷರು : ಮಾನ್ಯ ಸಚಿವರು ಈಗಾಗಲೇ ಹೇಳಿದ್ದಾರಲ್ಲ. ನೀವು ಮತ್ತೆ ಮತ್ತೆ ಅದನ್ನೇ ಕೇಳಬೇಡಿ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಂ.ಟಿ. ಕೃಷ್ಣಪ್ಪ : ಮಾನ್ಯ ಜಲಸಂಪನ್ಮೂಲ ಸಚಿವರು ಏತ ನೀರಾವರಿ ಯೋಜನೆಯನ್ನು ಮಂಜೂರು ಮಾಡಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಅಭಿನಂದನೆಯನ್ನು ಸಲ್ಲಿಸಿದ್ದೇನೆ. ಆದರೆ ಅದು ಕಾರ್ಯ ಶುರುವಾಗಿಲ್ಲ.

ಅಧ್ಯಕ್ಷರು : ಹಾಲಿ ಪ್ರಶ್ನೆಗೆ ಪೂರಕವಾಗಿ ನೀವು ಉಪ ಪ್ರಶ್ನೆಯನ್ನು ಕೇಳಿದರೆ ಪರವಾಗಿಲ್ಲ ಆದರೆ ಅದನ್ನು ಬಿಟ್ಟು ನೀವು ಹೊಸದಾಗಿ ಪ್ರಶ್ನೆ ಕೇಳಿದರೆ ನಿಮಗೆ ಉತ್ತರ ಕೊಡಲು ಅವರ ಹತ್ತಿರ ಎಲ್ಲಿದೆ ಉತ್ತರ?

ಶ್ರೀ ಎಂ.ಟಿ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ಈಗ ಸಾವಿರ, ಸಾವಿರದ ಇನ್ನೂರ ಅಡಿಯವರೆಗೆ ಹೋದರೂ ಕೂಡ ನೀರು ಸಿಗುತ್ತಿಲ್ಲ. ಕುಡಿಯುವ ನೀರಿಗೆ ಬಹಳ ಕಷ್ಟ ಪರಿಸ್ಥಿತಿಯಿದೆ. ಆದುದರಿಂದ ಕೆರೆ ಕಾಮಗಾರಿಯನ್ನು ಬೇಗ ಕೈಗೆತ್ತಿಕೊಳ್ಳಬೇಕೆಂದು ತನ್ನ ಮೂಲಕ ಮಾನ್ಯ ಸಚಿವರಿಗೆ ಒತ್ತಾಯ ಮಾಡುತ್ತೇನೆ.

(ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರಗಳು :

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ: 26.03.2012ರ 1ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 37 ಪ್ರಶ್ನೆಗಳ ಪೈಕಿ 21 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು (ಅನುಬಂಧ–I)

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಪಿ.ಯು.ಸಿ. ಪ್ರಶ್ನೆ ಪತ್ರಿಕೆಗಳು ಲೀಕ್ ಔಟ್ ಆಗಿರುವ ಬಗ್ಗೆ ಮತ್ತು ಕಾವೇರಿ ನೀರನ್ನು ಬಿಡಬಾರದೆನ್ನುವ ಬಗ್ಗೆ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಲು ಈಗಾಗಲೇ ನೋಟಿಸ್ ಕೊಟ್ಟಿದ್ದೇನೆ.

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) : ಮಾನ್ಯ ಅಧ್ಯಕ್ಷರೆ, ಕಾವೇರಿ ನೀರಿಗೆ ಸಂಬಂಧಪಟ್ಟಂತೆ ಮತ್ತು ಪ್ರಶ್ನೆ ಪತ್ರಿಕೆಗಳು ಲೀಕ್ ಔಟ್ ಆಗಿರುವುದಕ್ಕೆ ಸಂಬಂಧಪಟ್ಟಂತೆ ಇನ್ನು ಒಂದು ಘಂಟೆಯೊಳಗೆ ಸರ್ಕಾರವೇ ಸ್ಟೇಟ್‌ಮೆಂಟ್ ಮಾಡುತ್ತದೆ. ಆನಂತರ ಅದರ ಮೇಲೆ ಚರ್ಚೆ ಮಾಡಬಹುದು.

ಅಧ್ಯಕ್ಷರು : ವಿರೋಧ ಪಕ್ಷದ ನಾಯಕರೆ, ಇನ್ನು ಒಂದು ಘಂಟೆಯೊಳಗೆ ಸರ್ಕಾರದಿಂದ ಸ್ಟೇಟ್‌ಮೆಂಟ್ ಕೊಡಿಸುತ್ತೇವೆಂದು ಹೇಳಿದ್ದಾರೆ. ಸರ್ಕಾರದಿಂದ ಸ್ಟೇಟ್‌ಮೆಂಟ್ ಆದಮೇಲೆ ತಾವು ಚರ್ಚೆ ಮಾಡುವಿರಂತೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಈಗಾಗಲೇ ತಮಿಳುನಾಡಿನವರು ಕಾವೇರಿ ನೀರು ಬಿಡಬೇಕೆಂದು ಕ್ಯಾತೆ ತೆಗೆಯುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ : ಶಂಕರಲಿಂಗೇಗೌಡರೆ, ಸರ್ಕಾರವೇ ಕಾವೇರಿ ನೀರಿನ ಬಗ್ಗೆ ಇನ್ನು ಒಂದು ಘಂಟೆಯೊಳಗೆ ಸ್ಟೇಟ್‌ಮೆಂಟ್ ಮಾಡುತ್ತದಂತೆ. ಆಮೇಲೆ ನಾವು ಮತ್ತು ನೀವೆಲ್ಲರೂ ಈ ವಿಚಾರದ ಬಗ್ಗೆ ಚರ್ಚೆ ಮಾಡೋಣ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ತಮಿಳುನಾಡಿಗೆ ನೀರು ಬಿಡಬಾರದು.

ಶ್ರೀ ಸಿದ್ದರಾಮಯ್ಯ : ಹೌದು, ಯಾವುದೇ ಕಾರಣಕ್ಕೂ ಕಾವೇರಿಯ ಒಂದು ತೊಟ್ಟು ನೀರನ್ನೂ ತಮಿಳುನಾಡಿಗೆ ಬಿಡಕೂಡದು.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮತ್ತೆ ತಮಿಳುನಾಡಿನವರು ನೀರು ಬಿಡಬೇಕೆಂದು ಕ್ಯಾತೆ ತೆಗೆಯುತ್ತಿದ್ದಾರಲ್ಲ?

ಶ್ರೀ ಸಿದ್ದರಾಮಯ್ಯ : ಕೋರ್ಟಿಗೆ ಹಾಕಿದ್ದಾರೆ. ಕೋರ್ಟ್‌ನಲ್ಲಿ ನಾವು ಫೈಟ್ ಮಾಡಬೇಕು, ಇದಕ್ಕಾಗಿ ಸರ್ಕಾರ ನೀರು ಬಿಡುವುದಿಲ್ಲವೆಂದು ಗಟ್ಟಿಯಾಗಿ ನಿಲ್ಲಬೇಕು. ಈಗಾಗಲೇ ಕಾವೇರಿ ನೀರಿನಲ್ಲಿ ನಮಗೆ ಅನ್ಯಾಯವಾಗಿಬಿಟ್ಟಿದೆ. ಆದಕಾರಣ ಇದರ ಬಗ್ಗೆ ಚರ್ಚೆ ಮಾಡೋಣ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ಮೈಸೂರಿನಲ್ಲಿ ಗಲಾಟೆಯಾಗುತ್ತಿದೆ. ನೀವೂ ಕೂಡ ಕೊಡಗಿನವರು. ಕೊಡಗಿನಲ್ಲಿಯೇ ನೀರಿಲ್ಲ.

ಅಧ್ಯಕ್ಷರು : ನಮ್ಮನ್ನೂ ಕೂಡ ಬದುಕುವುದಕ್ಕೆ ನೀವು ಬಿಡುವುದಿಲ್ಲ. ನಿಮಗೆ ಕಾವೇರಿ ನೀರು ಬೇಕೆಂದು ಹೇಳಿ ನಾವು ಅಲ್ಲಿ ಏನು ಮಾಡುವುದಕ್ಕೆ

ಹೋದರೂ ಕೂಡ ನಮ್ಮ ಮೇಲೆಯೇ ಒಂದು ರೀತಿ ಮಾಡುತ್ತೀರಲ್ಲ? ನಿಮಗೆ ಕೊಡಗು ಕೇವಲ ನೀರು ಬರುವುದಕ್ಕೆ ಮಾತ್ರ ಬೇಕು, ಬೇರೆಯದಕ್ಕೆ ಬೇಡ.

ಶ್ರೀ ಸಿದ್ದರಾಮಯ್ಯ : ಕರ್ನಾಟಕಕ್ಕೆ ಅನ್ಯಾಯವಾಗಿದೆ.

ಅಧ್ಯಕ್ಷರು : ವಿರೋಧ ಪಕ್ಷದ ನಾಯಕರೆ, ಸಭೆಯ ಮುಂದಿಡಲಾಗುವ ಕಾಗದ ಪತ್ರಗಳನ್ನು ಮಂಡಿಸುವ ವಿಷಯವಿದೆ. ಈಗ ಅದನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ : ಆಯಿತು.

3. ಸಭೆಯ ಮುಂದಿಡಲಾದ ಕಾಗದ ಪತ್ರಗಳು :

ಸಭೆಯ ಮುಂದಿಡಲಾದ ಕಾಗದ ಪತ್ರಗಳ ಪಟ್ಟಿ (ಎರಡನೇ ಪಟ್ಟಿ)

I. ಶ್ರೀ ಡಿ.ವಿ. ಸದಾನಂದಗೌಡ, (ಮಾನ್ಯ ಮುಖ್ಯಮಂತ್ರಿಯವರು) : ಮಾನ್ಯ ಅಧ್ಯಕ್ಷರೇ,

1999ರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮದ ಕಲಂ 25(2)ರ ಮೇರೆಗೆ:

1) ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು ಇದರ ಎಲ್ಲಾ ಸಂಗ್ರಹಣೆಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ, ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ ಸಂಗ್ರಹಿಸತಕ್ಕದೆಂದು ದಿನಾಂಕ: 22.08.2011 ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಸಿಆಸುಇ:2:ಇಸಂಗ್ರ:2011.

2) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ಇದರ ರೂ.1.00 ಲಕ್ಷಕ್ಕೂ (ಒಂದು ಲಕ್ಷ) ಮೀರಿದ ಎಲ್ಲಾ ಸಂಗ್ರಹಣೆಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ, ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ ಸಂಗ್ರಹಿಸತಕ್ಕದೆಂದು ದಿನಾಂಕ: 09.09.2011 ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ:ಸಿಆಸುಇ:2:ಇಸಂಗ್ರ:2011(2).